ಊಟ ಮಾಡಿದರೆ ಸಾಕಾಗಿದೆ.'

ರಾಮು ಹೆದರಿ ಸುಮ್ಮನಾಗಿದ್ದ. ಕಾಕಿ ಯಾವಾಗಲೂ ಹೀಗೇ. ಆದರೆ ಏಕೋ ಅವನಿಗೆ ಏನನ್ನೂ ಕಾಕಿ ಮಾತು ಮೀರಿ ಮಾಡೋಕೆ ಆಗುತ್ತಲೇ ಇರಲಿಲ್ಲ.

ಆ ಸಾಲಿನ ಕೊನೆಯಲ್ಲಿ ಕಬ್ಬಿನ ರಸದಂಗಡಿ, ಹಳೆಯ ಪುಸ್ತಕ ಮಾರುವವನು. ಇವರೆಲ್ಲಾ ರಾಮೂಗೆ ಹೆಚ್ಚು ಪರಿಚಯವಿಲ್ಲ.

ದಿನಾ ಬೆಳಿಗ್ಗೆ ಹತ್ತು ಗಂಟೆಗೆ ರಸ್ತೆಯಂಚಿನಲ್ಲಿದ್ದ ಇರಾನಿ ಹೋಟೆಲೊಂದರಿಂದ ಕೊಳಕು ನ್ಯೂಸ್ ಪೇಪರ್ ಹೊದಿಕೆಯ ಕೆಳಗೆ ನಾಲ್ಕು ಚಾ ಗ್ಲಾಸ್‌ಗಳೊಂದಿಗೆ ಚಿಕ್ಕ ಹುಡುಗನೊಬ್ಬ ಹಾಜರಾಗುತ್ತಿದ್ದ. ಮೊದಲನೆಯದು ಬಾಬಾನಿಗೆ, ಮತ್ತೆ ಚನಾವಾಲಾಗೆ, ಹಣ್ಣಿನವನಿಗೆ, ಕೊನೆಯದು ರಾಮೂಗೆ. ರಾಮು ಹತ್ತಿರ ದುಡ್ಡಿಲ್ಲದಾಗ ಮಾತಿಲ್ಲದೆ ಚನಾವಾಲಾ ಅವನ ಚಾಗೂ ದುಡ್ಡು ಕೊಡುತ್ತಿದ್ದ. ರಾಮು ಕೃತಜ್ಞತೆಯ ನೋಟದೊಂದಿಗೆ ಬಿಸಿ ಚಾ ಹೀರುತ್ತಿದ್ದ. ಮತ್ತೆ ಒಂದು ಗಂಟೆಗೆ ಕಾಕಿ ಪೇಪರ್‌ನಲ್ಲಿ ಸುತ್ತಿ ಕೊಟ್ಟಿರುತ್ತಿದ್ದ ರೊಟ್ಟಿ ಕಡಿದರೆ ರಾತ್ರಿವರೆಗೂ ಏನೂ ಇಲ್ಲ.

ತನ್ನ ಈ ಸ್ನೇಹಿತರೊಂದಿಗೆ ಅವನು ಹಂಚಿಕೊಳ್ಳುತ್ತಿದ್ದ ಅನುಭವಗಳೆಂದರೆ, ಮುಂಬೈನ ಕನಿಕರವಿಲ್ಲದೆ ಎಡಬಿಡದೆ 2–3 ತಿಂಗಳು ಸುರಿಯುವ ಮಳೆ, ಮೇ ತಿಂಗಳ ಉರಿಬಿಸಿಲು, ಆಗಾಗ ಫುಟ್‌ಪಾತ್ ಮಾರಾಟಗಾರರ ಮೇಲೆ ಆಗುತ್ತಿದ್ದ ಪೊಲೀಸರ ಹಲ್ಲೆ.

ರಾಮು ಕೂಡುವ ಜಾಗದ ಸ್ವಲ್ಪ ದೂರದಲ್ಲೇ ಸ್ಕೂಲೊಂದಿತ್ತು. ದಿನಾ ಬೆಳಿಗ್ಗೆ ಇವನು ಇಲ್ಲಿಗೆ ಬರುವ ಹೊತ್ತಿಗೆ ಸರಿಯಾಗಿ ಕಂದು ಬಣ್ಣದ ಚಡ್ಡಿ, ಬಿಳಿಯ ಶರಟು ಧರಿಸಿದ ಮಕ್ಕಳು ಭಾರವಾದ ಚೀಲ, ನೀರಿನ ಬಾಟಲುಗಳೊಂದಿಗೆ ಸ್ಕೂಲಿಗೆ ಹೋಗುತ್ತಿದ್ದುವು. ರಸ್ತೆಯ ತುಂಬಾ ಅವರದೇ ಗಲಾಟೆ. ಸ್ವಲ್ಪ ಹೊತ್ತಿನಲ್ಲಿ ಕೇಳಿ ಬರುತ್ತಿದ್ದ ಒಕ್ಕೊರಲಿನ ಪ್ರಾರ್ಥನೆ. ಪ್ರಾರ್ಥನೆಯ ಪದಗಳು ರಾಮೂಗೆ ಅರ್ಥವಾಗಿರಲಿಲ್ಲ. ಆದರೆ ಹಾಡಿನ ರಾಗ ಮನದಟ್ಟಾಗಿತ್ತು. ರಾಮು ಅದನ್ನು ಪದೇ ಪದೇ ಗುನುಗುನಿಸುತ್ತಿದ್ದ. ಸಂಜೆ ಆಯಿತೆಂದರೆ ಸ್ಕೂಲಿನ ಮೈದಾನದಿಂದ ಕೇಳಿಬರುತ್ತಿದ್ದ ಫುಟ್‌ಬಾಲ್, ಹಾಕಿ, ಕ್ರಿಕೆಟ್ ಆಡುವ ಹುಡುಗರ ಕೂಗಾಟ. ಆಗ ಅವನಿಗೆ ಅನ್ನಿಸುತ್ತಿತ್ತು ದಿನಾ ಗರಿಮುರಿಯಾದ ಯೂನಿಫಾರ್ಮ್ ಧರಸಿ ಸ್ಕೂಲಿಗೆ ಹೋಗೋದೆಂದರೆ ತುಂಬಾ ಮಜಾ ಇರಬೇಕು! ತನಗೆ ಬರುತ್ತಿದ್ದುದು ಮರಾಠಿ ಅಕ್ಷರಗಳು ಮಾತ್ರ. ಯಾವಾಗಲೋ ಅಪ್ಪ ಮನೆಯಲ್ಲೇ ಕಲಿಸಿದ್ದು. 'ಜಲ್ದಿ ಪಾಲಿಶ್ ಲಗಾವ್' ಎಚ್ಚರಿಸುತ್ತಿತ್ತು ಗಡಸು ದನಿಯೊಂದು.

ಒಂದೊಂದು ದಿನ ಅವನು ಸಂಜೆ ಬೇಗ ಮನೆಗೆ ಹೋದಾಗ, ಅವರ ಜೋಪಡ ಪಟ್ಟಿಯಲ್ಲಿದ್ದ 'ಕಮ್ಯುನಿಟಿ ಸೆಂಟರ್'ನಲ್ಲಿ ಟೆಲಿವಿಷನ್ ನೋಡುವುದಿತ್ತು. ಇದನ್ನು ಹೋದ ವರುಷ ಯಾರೋ ಗುಜರಾತಿಯೊಬ್ಬರು ದಾನ ಮಾಡಿದ್ದರು. ಅದರ ಪ್ರಾರಂಭೋತ್ಸವದ ದಿನ ಇವರ ಜೋಪಡ ಪಟ್ಟಿಯಲ್ಲಿ ತುಂಬಾ ಕಲರವ. ದಿನವೆಲ್ಲಾ ಲೌಡ್‌ಸ್ಪೀಕರ್‌ನಲ್ಲಿ ಹಿಂದಿ ಸಿನೆಮಾ ಹಾಡುಗಳು. ತಳಿರು ತೋರಣ, ಮಂತ್ರಿಯೊಬ್ಬರು ಬಂದು ರಿಬ್ಬನ್ ಕತ್ತರಿಸಿ ಟೆಲಿವಿಷನ್ ಸ್ವಿಚ್ ಒತ್ತಿದ್ದರು. ಅಂದು ಅಲ್ಲಿನ ಮಕ್ಕಳಿಗೆಲ್ಲಾ ಹಿಗ್ಗೋ ಹಿಗ್ಗು.

ಅಂದಿನಿಂದ ದಿನಾ ಸಂಜೆ ಆವರಣ ತುಂಬಿ ಹೋಗುತ್ತಿತ್ತು. ಗುರುವಾರದ ಛಾಯಾಗೀತ್, ಭಾನುವಾರದ ಸಿನೆಮಾ ಎಂದರೆ ಕಿಕ್ಕಿರಿದ ಜನ ಸಂದಣಿ. ಅವರಿಗಿದ್ದ ಏಕಮಾತ್ರ ಮನರಂಜನೆ ಎಂದರೆ ಅದು. ಟಿ.ವಿ. ಬಿಟ್ಟರೆ ರಾಮೂಗೆ ನೆನಪಿದ್ದಂತೆ ನೋಡಿದ ಸಿನೆಮಾ ಒಂದೋ,